# ತುಳು ಯಕ್ಷಗಾನ ರಂಗಪಠ್ಯಗಳು: ಅವಲೋಕನ

**ಯೋಗೀಶ ಕೈರೋಡಿ***

**DOI: https://doi.org/10.5281/zenodo.22108353**

**ABSTRACT**

ಯಕ್ಷಗಾನ ಪ್ರದರ್ಶನಕ್ಕೆ ಆಧಾರವಾಗಿರುವ ಪಠ್ಯವನ್ನು 'ಪ್ರಸಂಗ' ಎಂಬುದಾಗಿ ಕರೆಯುತ್ತೇವೆ. ಕತೆಯ ಆರಂಭದಿಂದ ಮುಕ್ತಾಯದ ವರೆಗಿನ ಸನ್ನಿವೇಶಗಳು ಪ್ರಸಂಗದಲ್ಲಿ ಅಡಕವಾಗಿವೆ. ಯಕ್ಷಗಾನಕ್ಕೆ ಸಂಬಂಧಿಸಿದ ತಾಳಲಯಗಳಲ್ಲಿ ಛಂದೋಬಂಧಗಳನ್ನು ಆಧರಿಸಿ 'ಪ್ರಸಂಗ' ರಚನೆಯಾಗುತ್ತದೆ. ಪದ್ಯವನ್ನು ಭಾಗವತರು ಯಕ್ಷಗಾನದ್ದೇ ಆದ ಶೈಲಿಯಲ್ಲಿ ಹಾಡುತ್ತಾರೆ. ಭಾಗವತಿಕೆಯೊಂದಿಗೆ ಹಿಮ್ಮೇಳದ ಮದ್ದಳೆ, ಚಂಡೆವಾದನವಿರುತ್ತದೆ. ಮುಮ್ಮೇಳದ ಪಾತ್ರವು ನೃತ್ಯ ಮತ್ತು ಅಭಿನಯದ ಮೂಲಕ ಪ್ರಸ್ತುತಪಡಿಸುತ್ತದೆ. ಯಕ್ಷಗಾನದ ಮಾತುಗಾರಿಕೆ ನಿರ್ದಿಷ್ಟ ಪಠ್ಯದ ಕಂಠಪಾಠವಲ್ಲ. ಪಾತ್ರಧಾರಿ ತನ್ನ ಪ್ರತಿಭಾಶಕ್ತಿ ಹಾಗೂ ಜ್ಞಾನದ ಮೂಲಕ ತನ್ನದೇ ನೆಲೆಯ ಮಾತುಗಾರಿಕೆಯ ಮೂಲಕ ಪಾತ್ರ-ಪ್ರಸಂಗಕ್ಕೆ ನ್ಯಾಯಕೊಡುತ್ತಾನೆ. ಯಕ್ಷಗಾನದ ಮಾತುಗಾರಿಕೆ ಸ್ವತಂತ್ರವಾದರೂ ಅದಕ್ಕಿರುವ ಬುನಾದಿ 'ಪ್ರಸಂಗ ಸಾಹಿತ್ಯ'. ಹಾಗೆಂದ ಮಾತ್ರಕ್ಕೆ ಪ್ರಸಂಗವೇ ಯಕ್ಷಗಾನದ ಪೂರ್ಣಪಠ್ಯವಲ್ಲ. ಕಲಾವಿದನ ವಾಚಿಕಾಭಿನಯ, ಪ್ರತ್ಯುತ್ಪನ್ನಮತಿತ್ವ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ.

ಪ್ರೇಕ್ಷಕವರ್ಗ ಹಾಗೂ ಪಾತ್ರದ ಗುಣವರಿತು ಪ್ರಸಂಗ ರಚನೆಯಾಗುತ್ತದೆ. ವಿವಿಧ ರಸಭಾವಗಳು ಬರುವಂತೆ ಪ್ರಸಂಗಕರ್ತ ಪ್ರಸಂಗ ರಚನೆ ಮಾಡುತ್ತಾನೆ. ಸಾತ್ವಿಕ ಪಾತ್ರದ ಪ್ರವೇಶ ಮತ್ತು ಪೀಠಿಕೆಯಿಂದ ಕತೆ ಆರಂಭವಾಗುತ್ತದೆ. ಆರಂಭದಲ್ಲಿ ಸಂತೃಪ್ತವಾಗಿದ್ದ ಸಾತ್ವಿಕ ಪಾತ್ರವು ಬೆಳೆಯುತ್ತಾ ಹಲವು ಸಂಕಟಗಳಿಗೆ ಒಳಗಾಗುತ್ತದೆ. ಈ ಸಂಕಟಕ್ಕೆ ಇದಿರು ವೇಷದ (ಖಳ ಪಾತ್ರ) ಉಪಟಳವೇ ಕಾರಣ. ಇದಿರು ವೇಷವು ರಂಗದಲ್ಲಿ ಮೆರೆಯುವ ಪಾತ್ರ. ಅಂತಿಮವಾಗಿ ದುಷ್ಟಪಾತ್ರದ ಸೋಲು, ಶರಣಾಗತಿ ಅಥವಾ ಸಾವಿನ ಮೂಲಕ ಪ್ರಸಂಗ ಮುಕ್ತಾಯಗೊಳ್ಳುತ್ತದೆ. ಸಾತ್ವಿಕ ಪಾತ್ರವು ಅಂತಿಮವಾಗಿ ಜಯ ಪಡೆದು ಪ್ರಸಂಗ ಸುಖಾಂತ್ಯಗೊಳ್ಳುತ್ತದೆ. ಯಕ್ಷಗಾನ ಪ್ರಸಂಗವು ಒಳಿತು ಕೆಡುಕಿನ ಸಂಘರ್ಷದ ಕತೆಯಾಗಿದೆ. ಸಾಂಪ್ರದಾಯಿಕವಾಗಿ ಯಕ್ಷಗಾನ ಪ್ರಸಂಗಗಳು ರಾಮಾಯಣ, ಮಹಾಭಾರತ ಹಾಗೂ ಭಾಗವತ ಮೂಲದ ಪ್ರಸಂಗವನ್ನು ಹೊಂದಿವೆ.

ಪೌರಾಣಿಕ, ಜಾನಪದ ಹಾಗೂ ಕಾಲ್ಪನಿಕ ಪ್ರಸಂಗಗಳು ತನ್ನದೇ ಆದ ಮಹತ್ವವನ್ನು ಹೊಂದಿವೆ. ವಿವಿಧ ವರ್ಗದ ಪ್ರೇಕ್ಷಕ ವರ್ಗವನ್ನು ಮುಟ್ಟುವಲ್ಲಿ ಯಶಸ್ಸನ್ನು ಕಂಡಿವೆ. ತುಳು

* **ಡಾ. ಯೋಗೀಶ ಕೈರೋಡಿ,** ಮುಖ್ಯಸ್ಥರು, ಕನ್ನಡ ವಿಭಾಗ, ಆಳ್ವಾಸ್ ಕಾಲೇಜು (ಸ್ವಾಯತ್ತ ), ಮೂಡುಬಿದಿರೆ.

ಭಾಷೆ ಮತ್ತು ಸಂಸ್ಕೃತಿಯ ವಿಸ್ತರಣೆಗೆ ತುಳು ಪ್ರಸಂಗಗಳು ತನ್ನದೇ ಆದ ಕೊಡುಗೆಗಳನ್ನು ನೀಡಿವೆ. ಕೆಲವು ಕಲಾವಿದರು ತುಳು ಪ್ರಸಂಗಗಳ ಮೂಲಕವೇ ಬೆಳಕಿಗೆ ಬಂದಿರುವುದನ್ನು ಗಮನಿಸಬಹುದು. ಮಧ್ಯಮ ವರ್ಗದ ದೊಡ್ಡ ಸಂಖ್ಯೆಯ ಪ್ರೇಕ್ಷಕ ಸಮೂಹವನ್ನು ಹಿಡಿದಿಟ್ಟುಕೊಳ್ಳುವಲ್ಲಿ ಸಫಲವಾಗಿದೆ. ಆದರೆ ತುಳು ಯಕ್ಷಗಾನ ಪ್ರಸಂಗಗಳು ಯಕ್ಷಗಾನದ ಮೂಲ ಸ್ವರೂಪಕ್ಕೆ ಒಗ್ಗಿಕೊಳ್ಳದ ಕಾರಣ ಕಾಲಗತಿಯಲ್ಲಿ ನೇಪಥ್ಯಕ್ಕೆ ಸರಿದಿವೆ.

**KEYWORDS:** ತುಳು ಯಕ್ಷಗಾನ, ರಂಗಪಠ್ಯ, ಪೌರಾಣಿಕ ಪ್ರಸಂಗಗಳು, ಜಾನಪದ ಪ್ರಸಂಗಗಳು, ಕಾಲ್ಪನಿಕ ಪ್ರಸಂಗಗಳು.

ರಾಮಾಯಣದ ಕತೆಯು ಅಕ್ಷರ ಜ್ಞಾನ ಇಲ್ಲದೇ ಇರುವ ಜನಸಮುದಾಯದಲ್ಲಿಯೂ ಜನಪ್ರಿಯವಾಗಿರುವ ಕತೆಯಾಗಿದೆ. ವಾಲ್ಮೀಕಿಯಿಂದ ರಚನೆಯಾಗಿರುವ ರಾಮಾಯಣವು ಹಲವು ರಾಮಾಯಣ ಕೃತಿಗಳ ರಚನೆಗೆ ಬುನಾದಿ. ವಿವಿಧ ರಾಮಾಯಣ ಕೃತಿಗಳನ್ನು ಗಮನಿಸಿ ಯಕ್ಷಗಾನಕ್ಕೆ ಸೂಕ್ತವಾದ ಭಾಗಗಳನ್ನು ಆಯ್ದು ಯಕ್ಷಗಾನ ಪ್ರಸಂಗ ರಚನೆ ಮಾಡಿರುವುದನ್ನು ಕಾಣಬಹುದಾಗಿದೆ. ಚೂಡಾಮಣಿ, ಅಂಗದ ಸಂಧಾನ, ಇಂದ್ರಜಿತು ಕಾಳಗ, ಮೈರಾವಣ ಕಾಳಗ, ರಾಮಪಟ್ಟಾಭಿಷೇಕ, ಕುಶಲವ ಕಾಳಗ, ವಾಲಿಮೋಕ್ಷ ಮುಂತಾದ ಯಕ್ಷಗಾನದ ಪೌರಾಣಿಕ ಪ್ರಸಂಗಗಳು ಇಂದಿಗೂ ಜನಪ್ರಿಯವಾಗಿವೆ. ಪ್ರದರ್ಶನಕ್ಕೆ ಯೋಗ್ಯವಾಗುವಂತೆ ಪ್ರಸಂಗ ರಚನೆ ಮಾಡಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ಯಕ್ಷಗಾನದ ಇನ್ನೊಂದು ಪ್ರಧಾನ ವಸ್ತು ಮಹಾಭಾರತ ಮೂಲದ್ದು. ಸಂಘರ್ಷವೇ ಈ ಕತೆಯ ಜೀವಾಳವಾಗಿರುವುದರಿಂದ ಯಕ್ಷಗಾನ ಪ್ರಸಂಗ ರಚನೆಗೆ ಬೇಕಾಗುವಷ್ಟು ಅವಕಾಶಗಳು ಈ ಕಾವ್ಯದಲ್ಲಿವೆ. ವ್ಯಾಸಭಾರತ ಮಾತ್ರವಲ್ಲದೆ ಕನ್ನಡ ಕಾವ್ಯಗಳಾದ ವಿಕ್ರಮಾರ್ಜುನ ವಿಜಯ, ಸಾಹಸಭೀಮ ವಿಜಯ ಹಾಗೂ ಕುಮಾರವ್ಯಾಸ ಭಾರತ ಕಾವ್ಯದ ಪ್ರೇರಣೆಗೆ ಯಕ್ಷಗಾನ ಪ್ರಸಂಗಗಳು ಒಳಗಾಗಿವೆ. ಲಕ್ಷ್ಮೀಶನ 'ಜೈಮಿನಿ ಭಾರತವು' ಯಕ್ಷಗಾನದ ಸನ್ನಿವೇಶ ಸೃಷ್ಟಿಗೆ ತುಂಬು ಅವಕಾಶಗಳನ್ನು ನೀಡಿದೆ. ಸುಧನ್ವ, ತಾಮ್ರಧ್ವಜ, ಮಯೂರಧ್ವಜ, ಬಭ್ರುವಾಹನನಂತಹ ಹಲವು ವೀರರ ಪಾತ್ರಗಳ ವೀರಗುಣವನ್ನು ಈ ಕಾವ್ಯ ವ್ಯಕ್ತಪಡಿಸಿದೆ. ಬಭ್ರುವಾಹನ ಕಾಳಗ, ವೀರ ಅಭಿಮನ್ಯು, ಭೀಷ್ಮಪ್ರತಿಜ್ಞೆ, ಗದಾಯುದ್ಧ, ಭೀಮಾರ್ಜುನ ಕಾಳಗ ಮುಂತಾದ ಪ್ರಸಂಗಗಳಿಗೆ ಮಹಾಭಾರತ ಹಾಗೂ ಮಹಾಭಾರತವನ್ನು ಆಧರಿಸಿ ಬಂದಿರುವ ಕನ್ನಡ ಕಾವ್ಯಗಳೇ ಪ್ರೇರಕ.

ದೇವಿ ಹಾಗೂ ವಿಷ್ಣುವಿನ ಮಹಿಮೆಯನ್ನು ಸಾರುವ ದೇವಿಪುರಾಣ ಮತ್ತು ಭಾಗವತ ಮೂಲದ ಪ್ರಸಂಗಗಳು ಯಕ್ಷಗಾನದಲ್ಲಿ ಜನಜನಿತವಾಗಿವೆ. ಯಕ್ಷಗಾನದ ಮೇಳದ ಹೆಸರಿನಲ್ಲೂ 'ದಶಾವತಾರ' ಎಂಬ ಹೆಸರು ಬರುತ್ತದೆ. ವಿಷ್ಣುವಿನ ಹತ್ತು ಅವತಾರಕ್ಕೆ ಸಂಬಂಧಿಸಿದ ಪ್ರಸಂಗಗಳು ಸಾಕಷ್ಟು ಬಂದಿವೆ. ರಾವಣವಧೆ, ನರಕಾಸುರ ವಧೆ, ಶ್ರೀಕೃಷ್ಣ ಪಾರಿಜಾತ ಮುಂತಾದ ಪ್ರಸಂಗಗಳು ಇಂದಿಗೂ ಪ್ರದರ್ಶನಗೊಳ್ಳುತ್ತಿವೆ. ಶಿವಪುರಾಣದ ಪ್ರಸಂಗಗಳೂ ಇವೆ.

**ಪೌರಾಣಿಕ ತುಳು ಪ್ರಸಂಗಗಳು**

ತೆಂಕುತಿಟ್ಟು ಯಕ್ಷಗಾನದ ಬಹುತೇಕ ಪ್ರೇಕ್ಷಕ ಸಮೂಹದ ಮಾತೃಭಾಷೆ ತುಳು. ಆದರೆ ಯಕ್ಷಗಾನ ಪ್ರಸಂಗಗಳು ಹೆಚ್ಚಾಗಿ ಕನ್ನಡದಲ್ಲಿ ಮಾತ್ರ ರಚನೆಯಾಗಿರುವುದನ್ನು

ಕಾಣಬಹುದು. ಶಿಕ್ಷಣ ಮಾಧ್ಯಮವು ಕನ್ನಡವಾಗಿರುವುದರಿಂದ ಕನ್ನಡ ಕಾವ್ಯ ಹಾಗೂ ಇತರ ಸಾಹಿತ್ಯ ಮೂಲಗಳನ್ನು ಓದಿದ ಪ್ರಸಂಗಕರ್ತ ಸಹಜವಾಗಿಯೇ ಕನ್ನಡದಲ್ಲಿ ಪ್ರಸಂಗ ರಚನೆಗೆ ತೊಡಗಿರಬಹುದು. ಯಕ್ಷಗಾನ ಮಾನವ ಜಗತ್ತಿಗಿಂತ ಭಿನ್ನವಾದ ಲೋಕವೊಂದನ್ನು ತೆರೆದಿಡುವುದರಿಂದ ಜನಭಾಷೆಗಿಂತ ಸ್ವಲ್ಪ ದೂರ ಇರುವ ಕನ್ನಡ ಪ್ರಸಂಗವೇ ಯಕ್ಷಗಾನಕ್ಕೆ ಸೂಕ್ತ ಎಂಬ ನೆಲೆಯಿಂದಲೂ ಬಹುಕಾಲ ಇತರ ಭಾಷೆಯಲ್ಲಿ ಪ್ರಸಂಗಗಳು ಬರಲಿಲ್ಲ. ಯಕ್ಷಗಾನದ ಭಾಷಾಮಾಧ್ಯಮದ ದೃಷ್ಟಿಯಿಂದ ಕನ್ನಡವೇ ಯಕ್ಷಗಾನಕ್ಕೆ ಪರಂಪರೆಯಾಯಿತು. ಸಾಹಿತ್ಯ ಹಾಗೂ ಕಲಾಪ್ರಕಾರಗಳಲ್ಲಿ ಹೊಸತನದ ಶೋಧನೆ ಹಾಗೂ ಪ್ರಯೋಗ ಸ್ವಾಭಾವಿಕ. ಯಕ್ಷಗಾನ ಪ್ರಸಂಗ ರಚನೆಯ ಆರಂಭಿಕ ಪ್ರಯೋಗವಾಗಿ ತುಳುವಿನಲ್ಲಿ ಪೌರಾಣಿಕ ಪ್ರಸಂಗಗಳು ರಚನೆಯಾದವು. ಈಗಾಗಲೇ ಕನ್ನಡದಲ್ಲಿ ಜನಪ್ರಿಯವಾಗಿದ್ದ ಪೌರಾಣಿಕ ಪ್ರಸಂಗಗಳನ್ನು ತುಳುವಿನಲ್ಲಿ ರಚಿಸಲಾಯಿತು. ಈ ಹಿನ್ನೆಲೆಯಲ್ಲಿ 'ತುಳು ಪಂಚವಟಿ', 'ತುಳು ಕಿಟ್ಲರಾಜಿ ಪರ್ಸಂಗೊ', 'ಖರದೂಷಣೆರೆ ವಧೆ', 'ಅಂಗದ ರಾಜಿ ಪರ್ಸಂಗ', 'ಸೇತು ಬಂಧೆ', 'ರಾವಣಮೋಕ್ಷೆ', 'ಸ್ವಾಮಿಭಕ್ತಿ ಅತಿಕಾಯೆ' ಹಾಗೂ 'ಕೃಷ್ಣಪಾರಿಜಾತ' ಪ್ರಸಂಗಗಳು ಉಲ್ಲೇಖಾರ್ಹವಾದುವು. ತುಳು ಪ್ರಸಂಗಗಳಲ್ಲಿ ತುಳು ಪಂಚವಟಿ, ತುಳು ಕಿಟ್ಲರಾಜಿ ಪರ್ಸಂಗೊ ಪ್ರಮುಖವಾದದ್ದು. 'ಖರದೂಷಣೆರೆ ವಧೆ' ಎಂಬ ಪ್ರಸಂಗವನ್ನು ಕೃಷ್ಣ ಎಂಬವರು ಬರೆದಿದ್ದು ಇದು ಪ್ರಕಟಗೊಂಡಿಲ್ಲ. ಕೆಸ್ತೂರು ದೊಡ್ಡಣ ಶೆಟ್ಟಿಯವರು ಅಂಗದ ಸಂಧಾನವನ್ನು 'ಅಂಗದ ರಾಜಿ ಪರ್ಸಂಗ' ಎಂತಲೂ, ಕಿನ್ನಿಮಜಲು ಈಶ್ವರಭಟ್ 'ತುಳು ಸೇತುಬಂಧ', ವಲಚ್ಚಿಲ್ ಸೀತಾರಾಮ ಆಳ್ವರ 'ರಾವಣಮೋಕ್ಷೆ' (ಇತ್ತೀಚಿನ ಪ್ರಸಂಗ) ಎಂಬ ಪ್ರಸಂಗಗಳನ್ನು ಬರೆದಿದ್ದಾರೆ. ಅನಂತರಾಮ ಬಂಗಾಡಿಯವರು 'ಸ್ವಾಮಿಭಕ್ತಿ ಅತಿಕಾಯೆ', ಎನ್. ನಾರಾಯಣ ಶೆಟ್ಟಿಯವರು 'ಕೃಷ್ಣ ಪಾರಿಜಾತ' ಪ್ರಸಂಗಗಳನ್ನು ರಚಿಸಿರುತ್ತಾರೆ. ಹೀಗೆ ಕನ್ನಡ ಭಾಷೆಯಲ್ಲಿರುವ ಪ್ರಸಂಗಗಳು ತುಳುವಿಗೆ ತರ್ಜುಮೆಗೊಂಡು ರಂಗ ಪ್ರದರ್ಶನ ಕಂಡವು.

ತುಳು ಸಾಹಿತ್ಯ ರಚನೆಯ ದೃಷ್ಟಿಯಿಂದ ಈ ರೀತಿಯ ಪ್ರಸಂಗ ರಚನೆಯನ್ನು ಪ್ರಮುಖ ಕೊಡುಗೆ ಎಂಬುದಾಗಿ ಗುರುತಿಸಬಹುದು. ಭಾಷೆಯ ದೃಷ್ಟಿಯಿಂದ ಜನತೆಗೆ ತೀರ ಹತ್ತಿರವಾಯಿತು. ಆದರೆ ಪುರಾಣ ಪ್ರಸಂಗಗಳನ್ನು ಕನ್ನಡದಲ್ಲೇ ಕೇಳಿದ ಮನೋಸ್ಥಿತಿಗೆ ಪೂರ್ಣ ಸ್ವೀಕರಿಸುವುದು ಸಾಧ್ಯವಾಗಲಿಲ್ಲ. ಅವಾಸ್ತವಿಕ ರಂಗಭೂಮಿಯಾದ ಯಕ್ಷಗಾನವು ಜನರಾಡುವ ತುಳುವಿನಲ್ಲಿ ಮಾತನಾಡುವುದು, ಅದರಲ್ಲೂ ಪುರಾಣೇತರ ಪ್ರಸಂಗಗಳಿಗೆ ಒಂದರ್ಥದಲ್ಲಿ ಸಹ್ಯವಾಗಲಿಲ್ಲ. ಆದರೆ ತುಳು ಯಕ್ಷಗಾನದ ಮುಂದಿನ ಬೆಳವಣಿಗೆಯ ದೃಷ್ಟಿಯಿಂದ ಇದು ಮಹತ್ವದ ಹೆಜ್ಜೆ.

ತುಳು ಪ್ರಸಂಗ ಸಾಹಿತ್ಯ ದೃಷ್ಟಿಯಿಂದ ತುಳು ಪೌರಾಣಿಕ ಪ್ರಸಂಗಗಳು ಆರಂಭಿಕ ಪ್ರಯತ್ನ. ತುಳುವಿನಲ್ಲಿ ಯಕ್ಷಗಾನ ಸಾಧ್ಯವಾಗುವುದಕ್ಕೆ ಇದು ಆರಂಭಿಕ ಹೆಜ್ಜೆ. ಈಗಾಗಲೇ ಕನ್ನಡದಲ್ಲಿ ನೋಡಿ ಒಪ್ಪಿಕೊಂಡ ಪ್ರೇಕ್ಷಕನಿಗೆ ಪುರಾಣ ಪಾತ್ರಗಳು ತುಳುವಿನಲ್ಲಿ ಮಾತನಾಡಿದಾಗ ತೀರ ಅಸಹಜವಾಗುವುದಿದೆ. ಯಕ್ಷಗಾನದ ಅತಿಮಾನುಷತೆಯ ಗುಣಕ್ಕೆ ಜನಸಮುದಾಯದ ಭಾಷೆಯಾಗಿರುವ ತುಳು ಸೂಕ್ತವಲ್ಲ. ಕೇವಲ ಪ್ರಸಂಗ ಪದ್ಯ ಮತ್ತು ಪಾತ್ರದ ಮಾತುಗಾರಿಕೆ ತುಳುವಾಯಿತೇ ಹೊರತು ವೇಷಭೂಷಣ ಬದಲಾಗಿಲ್ಲ. ಮಾತು ಮತ್ತು ವೇಷಕ್ಕೆ ಸಂಬಂಧಗಳು ಕಾಣದೆ ತುಳು ಪೌರಾಣಿಕ ಪ್ರಸಂಗಗಳು ಬಹುಕಾಲ ಬಾಳಲಿಲ್ಲ. ಆದರೆ ಆರಂಭಿಕ ಪ್ರಯೋಗದ ದೃಷ್ಟಿಯಿಂದ ಈ ಪ್ರಸಂಗಗಳಿಗೆ ಮಹತ್ವವಿದೆ.

**ಜಾನಪದ ಮೂಲದ ಪ್ರಸಂಗಗಳು**

ರಾಮಾಯಣ, ಮಹಾಭಾರತ ಹಾಗೂ ಭಾಗವತ ಮೂಲದ ಕತೆಗಳನ್ನು ಆಧರಿಸಿಯೇ ಯಕ್ಷಗಾನ ಪ್ರಸಂಗಗಳು ರಚನೆಯಾಗುತ್ತಿದ್ದವು. ಇಲ್ಲಿ ಪ್ರಸಂಗ ಸಾಹಿತ್ಯ ಹಾಗೂ ಅಭಿವ್ಯಕ್ತಿಯ ಭಾಷೆ ಕನ್ನಡ ಮಾತ್ರವಾಗಿತ್ತು. ಇದನ್ನು ಪೌರಾಣಿಕ ಅಥವಾ ಪರಂಪರೆಯ ಪ್ರಸಂಗ ಎಂಬುದಾಗಿ ಯಕ್ಷಗಾನದಲ್ಲಿ ಗ್ರಹಿಸಲಾಗುತ್ತದೆ. ಯಾವುದೇ ಕಲೆಯಲ್ಲಿ ಹೊಸ ಹೊಸ ಶೋಧನೆ ಹಾಗೂ ಪ್ರಯೋಗಶೀಲತೆ ಸಾಮಾನ್ಯ. ಪ್ರೇಕ್ಷಕರಿಗೆ ಹೊಸತನ್ನು ನೀಡಬೇಕೆಂಬ ತುಡಿತವೂ ಇದಕ್ಕೆ ಕಾರಣ.

ಕರ್ನಾಟಕದ ತುಳು ಭಾಷಿಕ ಸಮುದಾಯವಿರುವ ಕರಾವಳಿ ಭಾಗ ಪ್ರಾದೇಶಿಕವಾಗಿ, ಸಾಂಸ್ಕೃತಿಕವಾಗಿ ತನ್ನದೇ ಆದ ವೈಶಿಷ್ಟ್ಯಗಳನ್ನು ಹೊಂದಿದೆ. ದೈವಾರಾಧನೆ ಮತ್ತು ನಾಗಾರಾಧನೆ ಇಲ್ಲಿನ ಪ್ರಾಚೀನ ಆರಾಧನೆಗಳು. ದೈವಗಳಲ್ಲಿ ಬಹುತೇಕ ಪ್ರಾಣಿ ಸಂಬಂಧಿಯಾದರೆ, ಇನ್ನೂ ಕೆಲವು ಮಣ್ಣು–ಹೆಣ್ಣಿಗೆ ಸಂಬಂಧಿಸಿದವು. ಮತ್ತೆ ಕೆಲವು ಈ ನಾಡಿನಲ್ಲೇ ಜನಿಸಿ ಸತ್ಯ ಹಾಗೂ ಧರ್ಮಕ್ಕಾಗಿ ಹೋರಾಡುತ್ತಲೇ ದೈವತ್ವ ಏರಿದ ವೀರ ಪುರುಷರು. ಇಂತಹ ದೈವಗಳ ಕಥನವನ್ನು ಪ್ರಸ್ತುತಪಡಿಸುವ ಸಾಹಿತ್ಯವನ್ನು 'ಪಾಡ್ದನ' ಎಂಬುದಾಗಿ ಕರೆಯುತ್ತೇವೆ. ದೈವಗಳಿಗೆ ಹಾಗೂ ನಾಗಬೆರ್ಮೆರಿಗೆ ಸಂಬಂಧವಿದೆ. ಹೀಗೆ ಸಮುದಾಯ ಜನರ ಬದುಕಿನಲ್ಲಿ ಹಾಸುಹೊಕ್ಕಾಗಿದ್ದ ಜನಪದ ಕಥಾಂಶಗಳನ್ನು ಆಧರಿಸಿ ಪ್ರಸಂಗಗಳನ್ನು ರಚಿಸುವ ಹೊಸ ಪರಂಪರೆಯೊಂದು 70ರ ದಶಕದಿಂದ ಆರಂಭವಾಯಿತು.

ಹಂತ ಹಂತವಾಗಿ ಬೆಳೆದು ಪೂರ್ಣಪ್ರಮಾಣದ ತುಳು ಯಕ್ಷಗಾನವಾಗಿ ಮಾರ್ಪಾಟಾಯಿತು. ಆರಂಭದಲ್ಲಿ ತುಳು ಜಾನಪದ ಮೂಲದ ಪ್ರಸಂಗವನ್ನು ಆಯ್ದುಕೊಂಡರೂ ಕೂಡ ಪ್ರಸಂಗ ರಚನೆ ಹಾಗೂ ಅರ್ಥಗಾರಿಕೆ ಎರಡೂ ಕನ್ನಡದಲ್ಲೇ ಇತ್ತು. ಉದಾ: ಕೋಟಿ ಚೆನ್ನಯ. ನಂತರದ ದಿನಗಳಲ್ಲಿ ಪ್ರಸಂಗ ಕನ್ನಡದಲ್ಲಿ ರಚನೆಯಾದರೂ ಅರ್ಥ ನಿರ್ವಹಣೆ ತುಳುವಿನಲ್ಲಿ ನಡೆಯಿತು. ಉದಾ: ತುಳುನಾಡ ಸಿರಿ, ಕೊರ್ದಬ್ಬು ಬಾರಗ. ಕೆಲವೊಮ್ಮೆ ಪ್ರಸಂಗ ರಚನೆ ಕನ್ನಡದಲ್ಲಿದ್ದರೂ ಅರ್ಥ ನಿರ್ವಹಣೆ ಸಂದರ್ಭೋಚಿತವಾಗಿ ತುಳು ಮತ್ತು ಕನ್ನಡದಲ್ಲಿ ನಡೆಯುತ್ತಿತ್ತು. ಉದಾ: ಅಮರ ಶಿಲ್ಪಿ ವೀರ ಕಲ್ಕುಡ. ನಂತರದಲ್ಲಿ ಪ್ರಸಂಗ ರಚನೆ ಮತ್ತು ಅರ್ಥಗಾರಿಕೆ ಎರಡೂ ತುಳುವಿನಲ್ಲಿ ನಿರ್ವಹಿಸುವ ಹೊಸ ಸಾಧ್ಯತೆಯೊಂದು ನಡೆಯಿತು. ಕಾಡಮಲ್ಲಿಗೆ, ಪಟ್ಟದ ಪದ್ಮಲೆ ಹಲವು ಪ್ರಸಂಗಗಳು ಪ್ರದರ್ಶನಗೊಂಡು ತಕ್ಕಮಟ್ಟಿಗೆ ಪೂರ್ಣ ಪ್ರಮಾಣದ ತುಳುಯಕ್ಷಗಾನಗಳ ಕಾಲ ಆರಂಭವಾಯಿತು.

ಭೂತಗಳ ಹುಟ್ಟು ಪ್ರಸರಣವನ್ನು ತಿಳಿಸುವ ಪಾಡ್ದನ ಆಧಾರಿತ, ತುಳುನಾಡಿನ ಐತಿಹ್ಯ ಆಧಾರಿತ ಹಾಗೂ ದೈವ ಮತ್ತು ನಾಗನಿಗೆ ಸಂಬಂಧಿಸಿ ಜನಮನದಲ್ಲಿ ಇದ್ದ ನಂಬಿಕೆಗಳ ಹಿನ್ನೆಲೆಯಲ್ಲಿ ರಚನೆಯಾದ ಪ್ರಸಂಗಗಳನ್ನು ಜಾನಪದ ಮೂಲದ ಪ್ರಸಂಗಗಳು ಎಂಬುದಾಗಿ ಗ್ರಹಿಸಬಹುದಾಗಿದೆ.

ತುಳುಯಕ್ಷಗಾನ ಆರಂಭವಾದ ಸಂದರ್ಭವನ್ನು ಕಲಾವಿದ ಕೊಳ್ಯೂರು ರಾಮಚಂದ್ರ ರಾವ್ ಅವರು 'ಒಡ್ಡೋಲಗ' ಎಂಬ ಕೃತಿಯಲ್ಲಿ ಈ ಕೆಳಗಿನಂತೆ ನಿರೂಪಿಸಿದ್ದಾರೆ:

''ಇರಾ ಶ್ರೀ ಸೋಮನಾಥೇಶ್ವರ ಯಕ್ಷಗಾನ ನಾಟಕ ಮಂಡಳಿ (ಕುಂಡಾವು ಮೇಳ) ದಲ್ಲಿದ್ದ ದಿನಗಳು. ಒಂದೊಂದು ಊರಲ್ಲಿ 3–4 ದಿನಗಳ ಪ್ರದರ್ಶನ ನಡೆಯುತ್ತಿತ್ತು. ಪರಂಪರೆಯ ಪ್ರಸಂಗಗಳಾದ 'ಭೀಷ್ಮ ವಿಜಯ', ಶ್ರೀ ಕೃಷ್ಣಲೀಲೆ, ಕಂಸವಧೆ, ರುಕ್ಮಿಣಿ ಸ್ವಯಂವರ, ಸುಭದ್ರಾ ಕಲ್ಯಾಣ, ಕೀಚಕ ವಧೆ, ಪಂಚವಟಿ ವಾಲಿ ಸಂಹಾರ, ಹರಿಶ್ಚಂದ್ರ

ಇತ್ಯಾದಿ. ಒಂದೊಂದು ಪ್ರಸಂಗಗಳು ಒಂದು ರಾತ್ರಿಗೆ ಒಂದರಂತೆ ಸರಾಗವಾಗಿ ಸಾಗುತ್ತಿತ್ತು. ಒಮ್ಮೆ ಮೂಲ್ಕಿ ಸಮೀಪದ 'ಹೆಜಮಾಡಿ' ಎಂಬಲ್ಲಿ ನಮ್ಮ ಡೇರೆ ಹಾಕಲ್ಪಟ್ಟಿತ್ತು. ಅದೇ ದಿನ ಅಲ್ಲಿಗೆ ಸಮೀಪದ 'ಫಲಿಮಾರು' ಎಂಬಲ್ಲಿ ಧರ್ಮಸ್ಥಳ ಮೇಳದ ಬಯಲಾಟ ನಿರ್ಣಯವಾಗಿತ್ತು. ಈ ವಿಷಮ ಪರಿಸ್ಥಿತಿಯಲ್ಲಿ ನಮ್ಮ ಆಟವನ್ನು ರದ್ದುಪಡಿಸುವ ಪರಿಸ್ಥಿತಿ ಉಂಟಾಯಿತು. ಹೀಗೆ ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕಿ ನಾವು ಜನಾಕರ್ಷಣೆಗೆ ದಾರಿಯೇನು ಎಂದು ಯೋಚಿಸುತ್ತಿದ್ದಾಗ ಆ ಊರ ಮಹನೀಯರೊಬ್ಬರಿಂದ ಒಂದು ಸೂಚನೆ ಬಂತು. ನನ್ನಲ್ಲೊಂದು 'ಕೋಟಿಚೆನ್ನಯ' (ಪಂದುಬೆಟ್ಟು ವೆಂಕಟ್ರಾಯರ ರಚನೆ) ಎಂಬ ಪ್ರಸಂಗವಿದೆ, ಅದನ್ನು ಆಡುತ್ತೀರಾ? ಹೀಗೆ ಕೇಳಿದಾಗ ಮೇಳದ ಯಜಮಾನ ಕೊರಗ ಶೆಟ್ಟರ ಕುತೂಹಲ ಕೆರಳಿತು. ಪ್ರಸಂಗ ತರಿಸಿ ಎಲ್ಲರೂ ಕೂಡಿ ಸಮಾಲೋಚನೆ ನಡೆಸಿದೆವು. ಪ್ರದರ್ಶನ ನಿರ್ಧಾರವಾಯಿತು. ಪ್ರಚಾರ ನಡೆಯಿತು. ಕತ್ತಲಾಗುವಾಗ ಜನಸಾಗರವೇ ಸೇರಿತು. ಅಂದಿನ ಕಲಾವಿದರು ಆ ಪ್ರಸಂಗಕ್ಕೆ ಹೇಳಿ ಮಾಡಿಸಿದಂತಿದ್ದರು. ಪೆರುಮಾಳ ಬಲ್ಲಾಳ – ಮೋನಪ್ಪ ಶೆಟ್ಟಿ, ದೇಯಿಬೈದ್ಯೆತಿ – ರಾಮಚಂದ್ರ ಬಲ್ಯಾಯ, ಮಲ್ಲಯ ಬುದ್ಯಂತ – ಶಂಕರ ನಾರಾಯಣ ಸಾಮಗ, ಅಕ್ಕೆರಸು ಪೂಂಜೆದಿ – ಅಳಿಕೆ ರಾಮಯ್ಯ ರೈ, ಕೋಟಿ – ಬೋಳಾರ ನಾರಾಯಣ ಶೆಟ್ಟಿ, ಚೆನ್ನಯ – ಅಡ್ಕಸ್ಥಳ ನಾರಾಯಣ ಶೆಟ್ಟಿ, ಚಂದುಗಿಡಿ – ಮೂಡುಬಿದ್ರೆ ಕಿಟ್ಟು, ಕಿನ್ನಿದಾರು – ಅಡೂರು ರಾಮಚಂದ್ರ, ಪಯ್ಯಬೈದ್ಯ – ವಿಟ್ಲ ಗೋಪಾಲಕೃಷ್ಣ ಜೋಶಿ. ಸಣ್ಣ ಕೋಟಿ ಚೆನ್ನಯರಾಗಿ ಮಂಕುಡೆ ಸಂಜೀವ ಶೆಟ್ಟಿ, ಕೊಳ್ಳೂರು ರಾಮಚಂದ್ರರಾವ್. ಆ ದಿನ ಈ ಪ್ರಸಂಗವನ್ನು ತುಳು ಮತ್ತು ಕನ್ನಡ ಎರಡೂ ಭಾಷೆಗಳ ಮಿಶ್ರಣದಿಂದ ಪ್ರದರ್ಶಿಸಿದೆವು. ಮುಂದೆ ಈ ಪ್ರಸಂಗವು ನಮ್ಮ ಮೇಳಕ್ಕೆ ಆಧಾರ ಸ್ತಂಭವಾಗಿ ಎಲ್ಲೆಲ್ಲೂ ಪ್ರದರ್ಶನವಾಗಿ, ಅಂದಿನಿಂದ ಇಂದಿನವರೆಗೂ ಬಾಳಿ ಬದುಕಿದೆ. ಅಂದಿನ ಆ ಕಲಾವಿದರ ಪಾತ್ರಗಳ ಕಲ್ಪನಾ ಸೃಷ್ಟಿಯು ಜನಪ್ರಿಯವಾಗಿ ಮುಂದಿನ ಕಲಾವಿದರು ಆ ಆದರ್ಶವನ್ನೇ ಅನುಸರಿಸುತ್ತಾ ಬಂದಿದ್ದಾರೆಂದರೆ ಉತ್ಪ್ರೇಕ್ಷೆಯಾಗಲಾರದು. ಅಂದು ಆರಂಭವಾದ ತುಳು ಪ್ರಸಂಗವು ಮುಂದಿನ ತುಳು ಪ್ರಸಂಗಗಳ ಬೆಳವಣಿಗೆಗೆ ನಾಂದಿಯಾಯಿತು." (ಒಡ್ಡೋಲಗ, ಸಂಪಾದಕರು ಭಾಸ್ಕರ ರೈ ಕುಕ್ಕುವಳ್ಳಿ ಪು.ಸಂ– 475, 476)

ಯಾವುದೇ ಕಲಾಪ್ರಕಾರ ಜನಮನ್ನಣೆಯನ್ನು ಬಯಸುತ್ತದೆ. ಕಲಾಮನ್ನಣೆಯ ಜೊತೆಗೆ ಆರ್ಥಿಕ ಪ್ರಯೋಜನವನ್ನು ಅಪೇಕ್ಷಿಸುತ್ತದೆ. ಯಾವುದಾದರೊಂದು ಪ್ರಯೋಗ, ಪ್ರಯತ್ನ ಈ ರೀತಿ ಯಶಸ್ಸು ಕಂಡಾಗ ಅದೇ ದಾರಿಯಲ್ಲಿ ಪ್ರಯತ್ನ ಸಾಗುತ್ತದೆ. 'ಕೋಟಿ ಚೆನ್ನಯ'ದಂತಹ ತುಳು ಪ್ರಸಂಗಗಳನ್ನು ಜನ ಸ್ವೀಕರಿಸುವುದಕ್ಕೆ ಕಲೆಯ ಒಳಗಿನ ಹಾಗೂ ಹೊರಗಿನ ಕಾರಣಗಳಿವೆ. ಕರುಣ, ವೀರ ಹಾಗೂ ಹಾಸ್ಯರಸಕ್ಕೆ ಈ ಪ್ರಸಂಗದಲ್ಲಿರುವ ಅವಕಾಶ ಕಲೆಯ ಒಳಗಿನ ಕಾರಣವಾಗಿದ್ದರೆ, ಕೋಟಿ ಚೆನ್ನಯರ ಬಗ್ಗೆ ಜನಮಾನಸದಲ್ಲಿ ತುಂಬಿರುವ ನಂಬಿಕೆ–ಅಭಿಮಾನಗಳು ಕಲೆಯ ಹೊರಗಿನ ಕಾರಣಗಳು. ಈ ಮೊದಲೇ ಪಾಡ್ದನಗಳ ಮೂಲಕ ಪರಿಚಯವಿರುವ ಕತೆಯನ್ನು ಯಕ್ಷಗಾನದ ಮೂಲಕ ನೋಡುವುದನ್ನು ಪ್ರೇಕ್ಷಕ ಇಷ್ಟಪಟ್ಟ. ರಂಗದಲ್ಲಿ ಮಿಂಚುತ್ತಿರುವ ಕೋಟಿ ಚೆನ್ನಯರನ್ನು ತನ್ನದೇ ಬಂಧು ಎಂದು ಭಾವಿಸಿ ಯಕ್ಷಗಾನವನ್ನು ಆಸ್ವಾದಿಸಿದ ಸಾಧ್ಯತೆಯೇ ಹೆಚ್ಚು. ಕೋಟಿ ಚೆನ್ನಯರ ಸ್ವಾಭಿಮಾನ, ಎದೆಗಾರಿಕೆ, ಒಗ್ಗಟ್ಟು, ಬೆರ್ಮೆರೆ ದಯೆ, ದುರಂತಮರಣ ಮೊದಲಾದ ಅಂಶಗಳ ಮೂಲಕ ಪ್ರೇಕ್ಷಕನಿಗೆ ಹಿತವಾದ ಪ್ರಸಂಗವಾಗಿ ಯಶಸ್ಸು ಕಂಡಿತು. ಇದನ್ನು ಅರಿತ ಪ್ರಸಂಗ ಕರ್ತರು ಇದೇ ಸ್ವರೂಪದ ಇತರ ಪ್ರಸಂಗಗಳ ರಚನೆಗೆ ಮುಂದಾದರು.

ತುಳುನಾಡ ಸಿರಿ, ದೇವು ಪೂಂಜ ಪ್ರತಾಪ, ಅಮರ ಶಂಭು ವೀರ ಕಲ್ಕುಡ, ಬ್ರಹ್ಮ

ಬಲಾಂಡಿ, ಪಟ್ಟದ ಪೆರುಮಳೆ, ಕೊರ್ದಬ್ಬು ತನ್ನಿಮಾನಿಗ, ತುಳುನಾಡ ಬಲಿಯಂದ್ರೆ, ಧರ್ಮ ದೈವ ಕೊಡಮಂದಾಯ, ಅಬ್ಬಗ ದಾರಗೆ, ಕಾಂತಾಬಾರೆ ಬೂದಾಬಾರೆ ಮುಂತಾದ ಪ್ರಸಂಗಗಳನ್ನು ಜಾನಪದ ಹಿನ್ನೆಲೆಯ ಆ ಕತೆಯನ್ನಾಯ್ದು ರಚಿಸಲಾಯಿತು. ಎಲ್ಲಾ ಪ್ರಸಂಗಗಳು 1990ರ ಕಾಲಾವಧಿಯವರೆಗೆ ಯಾವುದೇ ತೊಡಕಿಲ್ಲದೆ ಜನಾಕರ್ಷಣೆಗೆ ಪಾತ್ರವಾಯಿತು. ಜಾನಪದ ಪ್ರಸಂಗಗಳ ಪ್ರಧಾನವಸ್ತು ಒಂದೇ ಇದ್ದರೂ ಪ್ರಸಂಗಗಳ ಕಥಾಸ್ವರೂಪದಲ್ಲಿ ವೈವಿಧ್ಯತೆಯಿದೆ. ಸಾಕಷ್ಟು ಸ್ವಾರಸ್ಯಕರವಾದ ಕತೆಯಿರುವ ಪಾಡ್ದನಗಳನ್ನಾಯ್ದು ಪ್ರಸಂಗ ರಚಿಸುವುದು ಸುಲಭ. ಯಾಕೆಂದರೆ ಪಾಡ್ದನದ ಒಳಗೆಯೇ ಸಾಕಷ್ಟು ವಿಷಯ ದ್ರವ್ಯಗಳಿರುತ್ತದೆ. ಯಕ್ಷಗಾನ ಪ್ರದರ್ಶನಕ್ಕೆ ಸೂಕ್ತವಾಗುವಂತೆ ಪ್ರಸಂಗ ರಚಿಸುವುದಷ್ಟೇ ಇಲ್ಲಿನ ಕೆಲಸ. ಆದರೆ ಕಥಾಂಶಗಳು ಕಡಿಮೆ ಇರುವ ಪಾಡ್ದನವನ್ನಾಗಲಿ, ಐತಿಹ್ಯವನ್ನಾಗಲಿ ರೂಪಿಸುವ ಸಂದರ್ಭದಲ್ಲಿ ಪ್ರಸಂಗಕರ್ತ ಕೆಲವೊಂದು ಕಾಲ್ಪನಿಕ ಅಂಶಗಳನ್ನು ಯಕ್ಷಗಾನ ಚೌಕಟ್ಟಿಗೆ ಹಾಗೂ ಜನಪದರ ನಂಬಿಕೆಗೆ ಚ್ಯುತಿ ಬಾರದಂತೆ ರೂಪಿಸಿದ್ದಿದೆ. ಇಂತಹ ವೈವಿಧ್ಯ ಪ್ರಸಂಗಗಳನ್ನು ಹಾಗೂ ಅದರ ಪ್ರದರ್ಶನಗಳನ್ನು ಗಮನಿಸಿದಾಗ ಈ ವೈಶಿಷ್ಟ್ಯದ ಅರಿವಾಗುತ್ತದೆ.

ಕಲೆ-ಸಾಹಿತ್ಯಗಳಲ್ಲಿ ಕಲ್ಪನೆಯೆಂಬುದು ಸಹಜವಾದುದು. ಪುರಾಣ ಸಂಬಂಧಿ ಕತೆಗಳಾದರೂ ಅದು ಕಲ್ಪನೆಯ ನೆಲೆಯಲ್ಲಿಯೇ ರಚನೆಯಾಗಿರುತ್ತದೆ. ಕತೆಯೊಂದು ವಾಸ್ತವಿಕವಾಗಿ ಸಂಭವಿಸಿದ್ದಿರಬಹುದಾಗಿದ್ದರೂ ಅದನ್ನು ಯಥಾಸ್ಥಿತಿ ಪ್ರಕಟಿಸಿದಾಗ ಅದು ಶ್ರೇಷ್ಠ ಕತೆ ಅಥವಾ ಸಾಹಿತ್ಯವಾಗಲಾರದು. ಕವಿ ಕಲ್ಪನಾ ಜಗತ್ತು ಕತೆಯ ಸೊಗಸನ್ನು ಹೆಚ್ಚಿಸಿ ಸಹೃದಯನನ್ನು ಗೆಲ್ಲುವಲ್ಲಿ ಸಹಾಯಕವಾಗಿರುತ್ತದೆ. ನಮ್ಮ ಪುರಾಣ, ಮಹಾಕಾವ್ಯಗಳು ವಾಸ್ತವಿಕವಾಗಿ ನಡೆದ ಘಟನೆ ಎಂಬ ನಂಬಿಕೆ ಜನಮಾನಸದಲ್ಲಿದ್ದರೂ ಕತೆಯ ಜನಪ್ರಿಯತೆಗೆ ಅದರಲ್ಲಿ ಸೇರಿರುವ ಕವಿಯ ಕಲ್ಪನಾ ಸಾಧ್ಯತೆಯೇ ಕಾರಣವಾಗಿದೆ. ಒಂದೇ ಕಥಾವಸ್ತುವನ್ನು ವಿವಿಧ ಕವಿಗಳು ಬರೆದ ಉದಾಹರಣೆಗಳು ನಮ್ಮಲ್ಲಿದೆ. ಇಲ್ಲಿ ಒಂದೇ ಕಥಾವಸ್ತುವಾದರೂ ವಿವಿಧ ಕವಿವರ್ಯರ ಕಲ್ಪನೆ ಅಥವಾ ಹೊಸತನದ ಕಾರಣಕ್ಕಾಗಿ ಭಿನ್ನವಾಗಿ ನಿಲ್ಲುತ್ತದೆ. ಆದುದರಿಂದ ಕಲ್ಪನೆಯೆಂಬುದು ಕಲೆ-ಸಾಹಿತ್ಯಗಳ ಸಾಮಾನ್ಯ ಲಕ್ಷಣ.

ಪುರಾಣ, ಐತಿಹ್ಯ ಸಂಬಂಧಿ ಕಥಾವಸ್ತುಗಳು ಯಕ್ಷಗಾನ ಪ್ರಸಂಗ ರಚನೆಗೆ ಪ್ರಮುಖ ಆಕರ ಸಾಮಗ್ರಿಗಳಾಗಿವೆ. ಮೂಲದ ಕತೆಯಲ್ಲಿ ಅಥವಾ ಮೂಲ ಕತೆಯ ಆಧಾರದಿಂದ ರೂಪುಗೊಂಡ ಪೌರಾಣಿಕ ಪ್ರಸಂಗದಲ್ಲಿಯೂ ಕವಿ ಕಲ್ಪನೆಗಳು ಸೇರಿಕೊಳ್ಳುತ್ತವೆ. ಆದರೆ ಇದನ್ನು ಕಾಲ್ಪನಿಕ ಪ್ರಸಂಗ ಎಂಬುದಾಗಿ ಯಕ್ಷಗಾನ ಸ್ವೀಕರಿಸುವುದಿಲ್ಲ. ಯಾಕೆಂದರೆ ಆ ಕಥಾವಸ್ತುವಿಗೊಂದು ಪುರಾಣದ ಹಿನ್ನೆಲೆಯಿದೆ. ಐತಿಹ್ಯಗಳಿಗೆ ಜಾನಪದ ಸಾಹಿತ್ಯಗಳಲ್ಲಿ ಉಲ್ಲೇಖವಿದೆ. ಆದುದರಿಂದ ಇದು ಕವಿಯ ಕಲ್ಪನೆಯಲ್ಲ. ಮೂಲ ವಸ್ತುವಿಗೆ ಪೂರಕವಾಗಿ ಕವಿಕಲ್ಪನೆಯು ಸೇರಿಕೊಂಡರೂ ನಗಣ್ಯವಾಗಿರುತ್ತದೆ.

**ಕಾಲ್ಪನಿಕ ಪ್ರಸಂಗಗಳು**

ಪುರಾಣದ, ಐತಿಹ್ಯದ ಚರಿತ್ರೆಯ ಹಿನ್ನೆಲೆಯಿಲ್ಲದೆ ಕವಿ ಕಲ್ಪನೆಯಲ್ಲಿಯೇ ಹುಟ್ಟಿಕೊಂಡ ಕಥಾಪ್ರಸಂಗವನ್ನು ಯಕ್ಷಗಾನದಲ್ಲಿ 'ಕಾಲ್ಪನಿಕ ಪ್ರಸಂಗ' ಎಂಬುದಾಗಿ ಗುರುತಿಸಿದ್ದಾರೆ. ಇಂತಹ ಕಾಲ್ಪನಿಕ ಪ್ರಸಂಗಗಳು ಹಿಂದೆಯೂ ಬಂದಿವೆಯಾದರೂ ಪುರಾಣದ ಲೇಪದಿಂದಲೇ ರಚನೆಗೊಂಡಿರುವುದರಿಂದ ಅದು ಪೌರಾಣಿಕ ಪ್ರಸಂಗವಾಗುತ್ತದೆ. ಮುನಿಯ ಶಾಪ, ದೇವೇಂದ್ರನ ಒಡೋಲಗ, ನಾರದನ ಪ್ರವೇಶ, ಬ್ರಹ್ಮನ ವರ, ಮುಂತಾದ

ಪುರಾಣದ ಸಿದ್ಧಮಾದರಿಗಳಿಂದ ರಚನೆಗೊಂಡ ಅದೆಷ್ಟೋ ಪ್ರಸಂಗಗಳ ಕತೆಯೂ ಯಾವುದೇ ಪುರಾಣಗಳಲ್ಲಿ ಉಲ್ಲೇಖಗೊಳ್ಳದಿದ್ದರೂ ಅದು ಪೌರಾಣಿಕ ಪ್ರಸಂಗವಾಗುತ್ತದೆ. ಈ ಹಿನ್ನೆಲೆಯಲ್ಲಿ ಯಕ್ಷಗಾನದಲ್ಲಿ ಪೌರಾಣಿಕ ಪ್ರಸಂಗ ಎನ್ನುವಾಗ ಈ ಬಗೆಯ ಗ್ರಹಿಕಾ ವ್ಯಾಪ್ತಿಯನ್ನು ಹೊಂದಿರುತ್ತದೆ. ಕಾಲ್ಪನಿಕ ಪ್ರಸಂಗದಲ್ಲಿ ಕತೆಯ ವಸ್ತು ಪುರಾಣ, ಐತಿಹ್ಯಗಳಲ್ಲಿ ಉಲ್ಲೇಖಗೊಂಡಿರುವುದಿಲ್ಲ. ಪೌರಾಣಿಕ ಯಕ್ಷಗಾನದಲ್ಲಿ ಬರುವ ವರ–ಶಾಪ, ಪೂರ್ವಜನ್ಮಫಲ, ಸ್ವರ್ಗ–ನರಕ ಕಲ್ಪನೆ ಇಲ್ಲಿರುವುದಿಲ್ಲ. ಇದಕ್ಕಿಂತ ಭಿನ್ನವಾದ ಸಾಮಾಜಿಕ ಹಿನ್ನೆಲೆಯಿಂದ ಕತೆಯೊಂದು ಹುಟ್ಟಿಕೊಳ್ಳುತ್ತದೆ. ಪುರಾಣದ ಅಥವಾ ಜಾನಪದ ಕತೆಯ ತಕ್ಕಮಟ್ಟಿನ ಪ್ರಭಾವವಿರಬಹುದಷ್ಟೆ. 1975–90ರ ಕಾಲಾವಧಿಯಲ್ಲಿ ತುಳು ಕಾಲ್ಪನಿಕ ಕಥಾವಸ್ತುವನ್ನು ಒಳಗೊಂಡ ನಾಟಕೀಯ ಸ್ವರೂಪದ ಯಕ್ಷಗಾನ ಸಾಕಷ್ಟು ಜನಪ್ರಿಯಗೊಂಡಿತು. ಇದು ಟೆಂಟು ಮೇಳಗಳಾದ ಕರ್ನಾಟಕ, ಕದ್ರಿ, ಸುರತ್ಕಲ್ ಮೇಳಗಳ ವೈಭವದ ಕಾಲ.

ತುಳುನಾಡಿನ ವಿವಿಧ ಅರಸುಮನೆತನ ಮೂಲಕ ಕತೆಯೊಂದು ಜೀವ ಪಡೆಯುತ್ತದೆ. ಅರಸು, ಯುವರಾಜ, ಖಳನಾಯಕ ಸ್ವಭಾವದ ಪ್ರತಿನಾಯಕ, ರಾಣಿ, ವಿದೂಷಕ ಇವು ಇಲ್ಲಿಯ ಪ್ರಮುಖ ಪಾತ್ರಗಳು. ಇವುಗಳ ಸುತ್ತವೇ ಕತೆ ಹುಟ್ಟಿ ಬೆಳೆಯುತ್ತದೆ. ಇಂತಹ ಕಾಲ್ಪನಿಕ ಪ್ರಸಂಗಗಳಲ್ಲಿ ಬರುವ ಪ್ರಮುಖ ಜನಪ್ರಿಯ ಅಂಶಗಳ ಮೂಲಕ ಇದನ್ನು ಸ್ಪಷ್ಟಪಡಿಸಬಹುದು. ಅರಸು ಪಾತ್ರದ ಪ್ರವೇಶದೊಂದಿಗೆ ಕತೆಯು ಆರಂಭವಾಗುತ್ತದೆ. ಪೀಠಿಕೆಯ ಮಾತಿನಲ್ಲಿ ತನ್ನ ನಾಡು ಸಕಲ ಸಂಪತ್ತಿನಿಂದ, ಸುಖ ನೆಮ್ಮದಿಯಿಂದ ಇರುವುದಾಗಿ ವ್ಯಕ್ತಗೊಳ್ಳುತ್ತದೆ. ದಾಂಪತ್ಯ ಬದುಕಿನಲ್ಲೂ ನೆಮ್ಮದಿಯಿದ್ದು, ತನ್ನ ಮಗ ಹಾಗೂ ಮಗಳನ್ನು ಗುರುಮಠಕ್ಕೆ ಸಕಲ ವಿದ್ಯೆಗಾಗಿ ಕಳುಹಿಸಿಕೊಡುತ್ತಾನೆ.

ಇಂತಹ ಕಾಲ್ಪನಿಕ ಪ್ರಸಂಗಗಳಲ್ಲಿ ದುಷ್ಟ ಸ್ವಭಾವದ ಪ್ರತಿನಾಯಕ ಖಳನಾಯಕ ಪ್ರಮುಖ ಪಾತ್ರವಾಗಿದೆ. ಅಧಿಕಾರದ ದಾಹ, ಕಾಮಾಂಧತೆಯಿಂದ ವರ್ತಿಸುತ್ತಾನೆ. ಈ ರೀತಿಯ ಪ್ರತಿನಾಯಕನ ಪಾತ್ರ ಒಂದು ನಾಡಿನ ಅರಸನಾಗಿಯೂ ಅಥವಾ ರಾಣಿಯ (ಅರಸನ ಮಡದಿ) ತಮ್ಮನಾಗಿಯೂ ಇರಬಹುದು. ಅಧಿಕಾರ ಮೋಹದಿಂದ ಮೋಸದ ಮೂಲಕ ಅರಸನ ನಾಶಕ್ಕೆ ಸಂಚುಹೂಡುತ್ತಾನೆ. ಈತನ ಮಾತಿಗೆ ಮರುಳಾಗಿ ಆಪ್ತಮಂತ್ರಿಯನ್ನು ಅಥವಾ ಮಡದಿಯನ್ನು ಹೊರಹಾಕುವ ಪ್ರಸಂಗ ಬರುತ್ತದೆ. ಕೊನೆಗೆ ಮೋಸಕ್ಕೆ ಬಲಿಬಿದ್ದು ರಾಜನೂ ಗಡಿಪಾರಾಗಿ ಬೀದಿಗೆ ಬರುತ್ತಾನೆ. ಪ್ರತಿನಾಯಕನ ಅಧಿಕಾರಕ್ಕೆ ಅಡ್ಡಿ ಆಗಬಲ್ಲ ರಾಜನ ಮಕ್ಕಳನ್ನು ಹಾಗೂ ರಾಜನನ್ನು ಕೊಲ್ಲಲು ಕಟುಕರ ಕೈಗೆ ಕೊಡುತ್ತಾನೆ. ಯಾವುದೋ ಕಾರಣದಿಂದ ಅವರು ಬದುಕಿ ಉಳಿದರೂ ಮುಂದೆ ಪ್ರತ್ಯೇಕವಾಗಿ ಇತರರ ಆರೈಕೆಯಲ್ಲಿ ಬೆಳೆಯುತ್ತಾರೆ.

ಖಳನಾಯಕ ಪಾತ್ರದ ದುಷ್ಟತನದ ವೈಭವೀಕರಣವು ಇಲ್ಲಿ ಸಾಮಾನ್ಯ. ಹೆಣ್ಣಿನ ಅಪಹರಣ, ಅತ್ಯಾಚಾರದ ಮೂಲಕ ಕತೆಯೂ ಬೆಳೆಯುತ್ತಾ ಹೋಗುತ್ತದೆ. ಇಂತಹ ಪ್ರಸಂಗಗಳಲ್ಲಿ ಹಾಸ್ಯಪಾತ್ರಕ್ಕೆ ಮಹತ್ವದ ಸ್ಥಾನವಿದೆ. ಪ್ರತಿನಾಯಕನ ಪ್ರತಿ ದುಷ್ಕೃತ್ಯಗಳಿಗೆ ವಿದೂಷಕನು ಪೂರಕವಾಗಿ ಕೆಲಸ ಮಾಡುತ್ತಾನೆ. ಯುವರಾಜ, ರಾಜಕುಮಾರಿ ಸಹೋದರ–ಸಹೋದರಿಯಾಗಿದ್ದರೂ ಕೂಡ ಅವರಿಗೆ ಅದರ ಅರಿವಿರುವುದಿಲ್ಲ. ಹಲವು ಘಟನೆಗಳು ಈ ಮಧ್ಯೆ ಸಂಭವಿಸುತ್ತವೆ. ಇದು ಕತೆಯ ಕುತೂಹಲಕ್ಕೆ ಕಾರಣವಾಗಿರುತ್ತದೆ. ದಿಕ್ಕುಪಾಲಾದ ಅರಸ, ಮಂತ್ರಿ, ರಾಣಿ ಪ್ರಸಂಗದ ಕೊನೆಯ ಹಂತದಲ್ಲಿ ಒಂದಾಗುತ್ತಾರೆ. ಅರಸ ತನ್ನ ತಪ್ಪು ನಿರ್ಧಾರಕ್ಕಾಗಿ ಪರಿತಪಿಸುವ ಸಂದರ್ಭ ಬರುತ್ತದೆ. ಸಹೋದರ–ಸಹೋದರಿಯರು ನಿರ್ದಿಷ್ಟ

ಸನ್ನಿವೇಶದಲ್ಲಿ ತಂದೆ– ತಾಯಿಯೊಂದಿಗೆ ಒಂದಾಗುವಲ್ಲಿ ಕತೆಯೂ ಒಂದು ಹಂತ ತಲುಪುತ್ತದೆ. ಪಾಪಕೃತ್ಯದೊಂದಿಗೆ ಮೆರೆದ ಪ್ರತಿನಾಯಕನನ್ನು ಕೊಂದು ನೆಮ್ಮದಿಯ ಸ್ಥಿತಿಯಲ್ಲಿ ಕತೆ ಮುಕ್ತಾಯ ಪಡೆಯುತ್ತದೆ.

ಒಂದಿಷ್ಟು ವ್ಯತ್ಯಾಸದೊಂದಿಗೆ ಇದೇ ಮಾದರಿಯಲ್ಲಿ ಹಲವು ತುಳು ಪ್ರಸಂಗಗಳು ರೂಪುಗೊಂಡಿವೆ. ಸಾತ್ವಿಕ ಪಾತ್ರವೊಂದಕ್ಕೆ ಒದಗಿ ಬಂದ ಸಂಕಟಗಳಿಗೆ ದೈವ–ದೇವರುಗಳಿಗೆ ಹೇಳಿಕೊಂಡ ಹರಕೆ ಸಂದಾಯ ಮಾಡದಿರುವ ವಿಚಾರವನ್ನು ತರುವ ಮೂಲಕ ಪೌರಾಣಿಕತೆಯ ಕನಿಷ್ಠ ಸಂಪರ್ಕ ತರುವ ಪ್ರಯತ್ನ ನಡೆಯುತ್ತದೆ. ಪುರಾಣ ಪ್ರಸಂಗದಲ್ಲಿ ಬರುವ ಕಪ್ಪು–ಬಿಳುಪು ಪಾತ್ರದ ಕಲ್ಪನೆ, ತೃಪ್ತ ಸ್ಥಿತಿಯಿಂದ ಆರಂಭಗೊಂಡು ಅತೃಪ್ತಿ–ಸಂಕಟಗಳು ಒದಗಿ ಬಂದು ತೃಪ್ತ ಸ್ಥಿತಿಯಲ್ಲಿ ಮುಕ್ತಾಯಗೊಳ್ಳುವ ಕ್ರಮ, ಖಳಪಾತ್ರವೊಂದರ ವಿಜೃಂಭಣೆ ಹಾಗೂ ಅವನತಿ ಮೊದಲಾದ ತಾತ್ವಿಕ ಅಂಶಗಳು ಕಾಲ್ಪನಿಕ ಪ್ರಸಂಗಗಳಲ್ಲಿಯೂ ಹಾಗೆಯೇ ಪ್ರಕಟಗೊಳ್ಳುತ್ತವೆ.

ತುಳು ಯಕ್ಷಗಾನ ಪ್ರಸಂಗ ಹಾಗೂ ಪ್ರದರ್ಶನದ ಮೂಲಕ ತುಳು ಸಂಸ್ಕೃತಿಯ ಅನಾವರಣಕ್ಕೆ ವೇದಿಕೆಯೊಂದು ನಿರ್ಮಾಣವಾಯಿತು. ತುಳುನಾಡಿನ ದೈವಾರಾಧನೆ, ನಾಗಾರಾಧನೆ ಹಾಗೂ ವಿವಿಧ ಬಗೆಯ ಆಚರಣೆಗಳು ಪ್ರಸಂಗದಲ್ಲಿ ನೇರವಾಗಿ ಹಾಗೂ ಪ್ರಾಸಂಗಿಕವಾಗಿ ಬಂದಿರುವುದನ್ನು ಗಮನಿಸಬಹುದು. ತುಳುನಾಡಿನ ನಂಬಿಕೆಗೆ ಪೂರಕವಾಗಿಯೇ ಪ್ರಸಂಗಗಳು ರಚನೆಯಾಗಿರುವುದನ್ನು ಗಮನಿಸಬಹುದು. ಸರ್ಪಸಂಕಲ್ಪ, ನಾಗತಂಬಿಲ, ಪರಕೆದ ಪಿಂಗಾರ, ಪರಕೆದ ಬದಿಕರ, ಬೊಳ್ಳಿಗಿಂಡೆ ಮೊದಲಾದ ಪ್ರಸಂಗಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು. ಪಾತ್ರವೊಂದರ ಪೀಠಿಕೆಯ ಮಾತು ಅಥವಾ ಸಂಭಾಷಣೆಯಲ್ಲಿ ಬರುವ ಗಾದೆ, ಒಗಟು ಹಾಗೂ ಉಪಕತೆಗಳ ಮೂಲಕ ತುಳುನಾಡಿನ ಸಂಸ್ಕೃತಿಯ ವಿವಿಧ ಅಂಶಗಳು ವ್ಯಕ್ತಗೊಂಡಿವೆ.

**ಪರಾಮರ್ಶನ ಗ್ರಂಥಗಳು:**


1. ಅಮೃತ ಸೋಮೇಶ್ವರ, ಯಕ್ಷಾಂದೋಳ, ಉಚ್ಚಿಲ (ದ. ಕ.): ಅಮೃತ ಸೋಮೇಶ್ವರ ಅಭಿನಂದನ ಸಮಿತಿ.
2. ಅಮೃತ ಸೋಮೇಶ್ವರ, (2007), ತುಳುವ ಜಾನಪದ ಕೆಲವು ನೋಟಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
3. ಕೇಶವ ಶರ್ಮ ಕೆ., ತೆಂಕುತಿಟ್ಟಿನ ಯಕ್ಷಗಾನ ಮುಖವರ್ಣಿಕೆ, ಶಿವಮೊಗ್ಗ: ಕನ್ನಡ ಭಾರತಿ, ಕುವೆಂಪು ವಿ.ವಿ.
4. ಭಾಸ್ಕರ ರೈ ಕುಕ್ಕುವಳ್ಳಿ (ಸಂ.), ಒಡ್ಡೋಲಗ, ಮಂಗಳೂರು: ಬಂಟರ ಯಕ್ಷಗಾನ ಕಲೋತ್ಸವ ಸಮಿತಿ.
5. ಯಕ್ಷ ಬಂಟರು ಸಂಸ್ಮರಣ ಸಂಚಿಕೆ – ಕಲಾವಿದರ ಕೈಪಿಡಿ, ಮಂಗಳೂರು: ಬಂಟರ ಯಕ್ಷಗಾನ ಕಲೋತ್ಸವ ಸಮಿತಿ.
6. ಪುರುಷೋತ್ತಮ ಬಿಳಿಮಲೆ, ಬಹುರೂಪ, ಹೊಸಪೇಟೆ: ಯಾಜಿ ಪ್ರಕಾಶನ.